ಮೈಸೂರ ಗೆಜೆಟ್.

ನಂ. 2] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಜನವರಿ ತಾ|| 24, ಸ್ ೧೮೯೫.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 11ನೇ ಡಿಸೆಂಬರ್ 1894.

ನಂ. 9636.—ಆರ್. ಯಫ್. 215—92. ಮೈಸೂರು ಶ್ರೀಮ್ ಮಹಾರಾಜಾ ಸರ್ಕಾರದವರು, XXIIIನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 6ನೇ ಪ್ಯಾರಾ ಆನಂತರ ಇದರಡಿ ಬರುವದನ್ನೆ 6Aನೇ ಪ್ಯಾರಾ ಯಂಬದಾಗಿ ಸೇರಿಸಲ್ಪಡತಕ್ಕದ್ದೆಂದು ಆಜ್ಞಾ ಪಿಸುತ್ತಾರೆ:—

"6 A. 3, 4, 5 ವ 6 ಪ್ಯಾರಾಗಳಲ್ಲಿ ಅಡಗಿರತಕ್ಕ ಹಿಂದಿನ ರೂಲ್ಸ್‌ಗಳು, ಯಾವ ರೈಲ್ವೇ ಸ್ಟೇಷ್ಯ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರುವಂಥಾ ಜಮೀನುಗಳಿಗೆ ಲಗಾವಾಗತಕ್ಕದ್ದಲ್ಲವು. ಈ ವಿಷಯಗಳಲ್ಲಿ 63 ವ 64ನೇ ಸೆಕ್ಷನ್‌ಗಳ ನಿಯಮಗಳು ಖಂಡಿತವಾಗಿ ಜಾರೀಲಿ ತರಲ್ಪಡತಕ್ಕದ್ದು.

ಮೇಲೆ ನಮೂದ್ಮಾಡಲ್ಪಟ್ಟ ಸರಹದ್ದುಗಳವಳಗಿನ ಯಾವ ಜಮೀನನ್ನ ಹೊಂಯುವದಕ್ಕೇ ಆಗಲಿ ಸಾಗುವಳಿಗೆ ಅಲ್ಲದ ಇತರ ಕೆಲಸಗಳಿಗೆ ದರಖಾಸ್ತು ಬಂದ ಸಮಯದಲ್ಲಿ ಲ್ಯಾಂಡ್ ರೆವಿನ್ಯೂ ಕೋಡಿನ 48ನೇ ಸೆಕ್ಷನ್(ಬಿ) ನ (ಸಿ) ಕ್ಲಾಜ್‌ಗಳಿಗನುಸಾರವಾಗಿ ಯಾವ ದಾದರೂ ಕಂದಾಯವನ್ನ ಹಾಕುವದಕ್ಕೂ ಅಥವ ಆ ಜಮೀನನ್ನ ಕೊಡುವದಕ್ಕೂ ಮುಂಜೆ ಡೆಪ್ಯುಟಿ ಕಮ್ಮಿಷನರವರು ಮುಂದಾಗೇ ಗವರ್ಮೆಂಟಿನವರ ಮುಂಜೂರಾತಿಯನ್ನು "ಪಡಿಯತಕ್ಕದ್ದು."

2. XXನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 7ನೇ ಪ್ಯಾರಾ ಆನಂತರ ಇದರಡಿ ಬರುವದನ್ನ 7 A. ಪ್ಯಾರಾ ಯಂಬ ಪಾಗಿ ಸೇರಿಸತಕ್ಕದ್ದು.

"7 A. ಯಾವದಾದರೂ ರೈಲ್ವೇ ಸ್ಟೇಷ್ಯ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರತಕ್ಕ ಹಿಡುವಳೀಲಿ ಇಲ್ಲದ ಸರ್ಕಾರ್ ಜಮೀನು, ಪ್ರತಿ ಸಂದರ್ಭದಲ್ಲಿಯೂ ಗವರ್ಮೆಂಟಿನವರ ಮುಂಜೂರಾತಿಯನ್ನು ಮುಂದಾಗಿ ಪಡಿಯದೇ ಯಾವ ವಿಧವಾದ ಸ್ವಂತ ಹಿಡುವಳಿಗೋಸ್ಕರವಾಗಲಿ, ಕೊಡಲ್ಪಡಕೂಡದು.

ತಾರೀಖು 22ನೇ ಡಿಸೆಂಬರ್ 1894.

ನಂ. 10656—ಜಿ. 2474—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಚಂಗಯ್ಯ ಕಟ್ಟರವರು 1894ನೇ ಇಸವಿ ಡಿಸೆಂಬರ್ 20ನೇ ತಾರೀಖು ಮೊದಲು 7 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 10658—ಸ್ಯ 1894ನೇ ಇಸವಿ ನವೆಂಬರ್ 12ನೇ ತಾರೀಖುಳ್ಳ 8307—ಜಿ. 1973ನೇ ನಂಬರುಳ್ಳ ಗವರ್ಮೆಂಟ್ ಇಸ್ತಿಹಾರ್‌ನಾಮೆಯ ಮೂಲಕ ಸಾಗರ ಮುನಸಿಫ್ ಮೆಸ್ಟರ್ ಡಿ. ಎಂ. ನರಸಿಂಗರಾಯರವರಿಗೆ ಬಗರ್ ತಲಬ್ ಕೊಡಲ್ಪಟ್ಟ ಬಂದು ತಿಂಗಳ ರಜಾ ಇದರಿಂದ ಯರಡು ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

ತಾರೀಖು 1ನೇ ಜನವರಿ 1895.

ನಂ. 10679—ಜಿ. 2490—ಮೂಲೂರು ತಾಲ್ಲೂಕು ಶರಸ್ತೇದಾರ್ ಸಿರಾ ಮೊಹದರ್ ಅಲ್ಲೀಯವರು, ವ್ಯತಪಟ್ಟ ಡಿ. ಮಧ್ವರಾಯರಿಗೆ ಬದಲು ಶ್ರೀನಿವಾಸಪುರದ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ವೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 3ನೇ ಜನವರಿ 1895.

ನಂ. 10681—ಜಿ. 2492—ಆಂಡರ್ ಸೆಕ್ರೆಟರಿ ಮೆಸ್ಟರ್ ಎಲ್. ಅನಂತಸಾವಿರಾಯರವರು, ಚೀಫ್ ಸೆಕ್ರೆಟರಿ ಮೆಸ್ಟರ್ ಟಿ. ಆನಂದರಾಯರ ಗೈರ್‌ಹಾಜರಿ ಕಾಲದಲ್ಲಿ ಅಥವ ಮತ್ತೊಂದು ಹುಕುಂ ಕೊಡುವ ತನಕ 1894ನೇ ಇಸವಿ ಡಿಸೆಂಬರ್ 10ನೇ ತಾರೀಖು ಮೊದಲು ದಿವಾನರವರ ಚೀಫ್ ಸೆಕ್ರೆಟರಿಯಾಗಿ ಕೆಲಸ ನೋಡುವಂತೆ ವೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಜನವರಿ 1895.

ನಂ. 10787—ಜಿ. 2505—ಚಿತ್ರದುರ್ಗ ಡಿಸ್ಟ್ರಿಕ್ಟು ಪ್ರೊಜೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ದೇವರಾಜೇ ಅರಸಿನವರಿಗೆ ಸ್ಯ 1894ನೇ ಇಸವಿ ಡಿಸೆಂಬರ್ 4ನೇ ತಾರೀಖಿನ 9058—ಜಿ. ಎಫ್. 338—92ನೇ ನಂಬರುಳ್ಳ ಇಸ್ತಿಹಾರ್ ನಾಮೆಯ ಮೂಲಕ ಬಗರ್ ತಲಬ್ ಕೊಡಲ್ಪಟ್ಟ ಬಂದು ತಿಂಗಳ ರಜಾ ಮತ್ತೊಂದು ತಿಂಗಳಿಗೆ ಇದರಿಂದ ಜಾಸ್ತಿ ಮಾಡಲ್ಪಟ್ಟಿದೆ.

ನಂ. 10790—ಜಿ. 2508—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ ಸಿ. ಡಿ. ರಾಮುಸ್ವಾಮಯ್ಯನವರು 1894ನೇ ಇಸವಿ ಡಿಸೆಂಬರ್ 25ನೇ ತಾರೀಖು ಮೊದಲು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ. 10792—ಜಿ. 2510,—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್ ಎಂ. ಕೃಷ್ಣರಾಯರವರು 1894ನೇ ಇಸವಿ ಡಿಸೆಂಬರ್ 22ನೇ ತಾರೀಖು ಮೊದಲು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ತಾರೀಖು 20ನೇ ಡಿಸೆಂಬರ್ 1894.

ನಂ. 10501.—ಆರ್. ಎಫ್. 101—93—1891ನೇ ಇಸವಿ ಡಿಸೆಂಬರ್ ಗುರ್ತೀ ತಾರೀಖಿಗೆ ಮುಂಚಿತವಾಗಿ ಸರ್ಕಾರ್ ನೌಕರಿಯಲ್ಲಿ ದಾಖಲಾದ ಈ ಸಂಸ್ಥಾನದ ಸರ್ಕಾರ್ ನೌಕರರ ಜೀವಮಾನಗಳನ್ನು ಭೀಮಾ ಮಾಡುವದಕ್ಕೋಸ್ಕರ ದರಖಾಸ್ತುಗಳು ಕಳುಹಿಸುವ ವಿಷಯದಲ್ಲಿ 1894ನೇ ಇಸವಿ ಜನವರಿ 24ನೇ ಮರ್ಕುಂ 11945—ಆರ್. ಎಫ್. 101—93ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡೋಣಾದ ವಾಯಿದೆಯನ್ನು ಗವರ್ಮೆಂಟಿನವರು ಚಾಲ್ತಿ 1894—95ನೇ ಸರ್ಕಾರ್ ಸಾಲಿನ ಆಖೈರ್‌ವರೆವಿಗೆ ವಿಸ್ತರಿಸಿಯಿರುತ್ತಾರೆ.

1891ನೇ ಇಸವಿ ಆಕ್ಟೋಬರ್ 27ನೇ ಮರ್ಕುಮಿನ ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಯಾನೆ ಜೀವಮಾನಗಳನ್ನು ಭೀಮಾ ಮಾಡಲು ಅಪೇಕ್ಷೆಯುಳ್ಳ ಸರ್ಕಾರ್ ನೌಕರರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಸದರೀ ನಿಬಂಧನೆಗಳ 17ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಅವರ ದರಖಾಸ್ತುಗಳು ರಜುಮಾಡಲ್ಪಟ್ಟು ಕ್ರಮವಾದ ಗವರ್ಮೆಂಟ್ ಆಫಿಸರಿಗೆ 1895ನೇ ಇಸವಿ ಜೂನ್ 30ನೇ ಮರ್ಕುಮಿನಲ್ಲಾಗಲಿ ತತ್‌ಪೂರ್ವವಾಗಲಿ ವಪ್ಪಿಸಲ್ಪಡತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ಅಂಗೀಕರಿಸಲ್ಪಡುವದಿಲ್ಲವು.